www.shikarat.com





1) ಈ ಕೆಳಕಂಡವುಗಳಲ್ಲಿ ಸಸ್ಯಕೋಶಗಳಲ್ಲಿರುವ ಆದರೆ ಪ್ರಾಣಿ ಕೋಶಗಳಲ್ಲಿ ಇರದಿರುವಂತಹವುಗಳಾವುವು?
ಎ) ಕೋಶಭಿತ್ತಿ & ಲೈಸೋಸೋಮ್
ಬಿ) ಕೋಶಭಿತ್ತಿ
ಸಿ) ಕೋಶಭಿತ್ತಿ & ಪ್ಲಾಸ್ಟಿಡ್‌ಗಳು
ಡಿ) ಕೋಶಭಿತ್ತಿ & ಗಾಲ್ಗಿಸಂಕೀರ್ಣ

2) ಈ ಕೆಳಗಿನ ಯಾವುದರಲ್ಲಿ ಲೈಸೋಸೈಮ್ ಎಂಬ ರಾಸಾಯನಿಕ ತಡೆ ಇದೆ?
1. ಕಂಬನಿ 2. ಮೂಗಿನಲ್ಲಿ ಸ್ರಾವ
3. ಲಾಲಾರಸ

ಸರಿಯಾದ ಉತ್ತರ ?
ಎ) 1 ಮಾತ್ರ ಬಿ) 1, 2 & 3
ಸಿ) 1 & 3 ಮಾತ್ರ ಡಿ) 2 & 3

3) ಲವಂಗದ ಎಣ್ಣೆಯಲ್ಲಿರುವ ಕ್ರಿಯಾತ್ಮಕ ಘಟಕ ಯಾವುದು?
ಎ) ಮೆಂಥಾಲ್ ಬಿ) ಯುಗೆನಾಲ್
ಸಿ) ಮೆಥೆನಾಲ್ ಡಿ) ಬೆಂಜಾಲ್ ಡಿಹೈಡ್

4) ಸಸ್ಯದ ಭಾಗ, ಮುಖ್ಯವಾಗಿ ಬೇರು ನೀರಿನ ಕಡೆಗೆ ವರ್ಧಿಸುವುದನ್ನು ಹೀಗೆಂದು ಕರೆಯುತ್ತಾರೆ?
ಎ) ಫೋಟೋಟ್ರೋಪಿಸಂ
ಬಿ) ಹೈಡ್ರೋಟ್ರೋಪಿಸಂ
ಸಿ) ಜಿಯೋಟ್ರೋಪಿಸಂ ಡಿ) ಥಿಗ್ಮೊಟ್ರೋಪಿಸಂ

5) ಕತ್ತಲೆ ಕೋಣೆಯೊಂದನ್ನು ಪ್ರವೇಶಿಸಿದಾಗ ತಕ್ಷಣವೇ ಏನೂ ಕಾಣಿಸುವುದಿಲ್ಲ ಸ್ವಲ್ಪ ಸಮಯದ ನಂತರ ವಸ್ತುಗಳು ಮಸುಕಾಗಿ ಕಾಣಿಸತೊಡಗುತ್ತವೆ ಇದಕ್ಕೆ ಕಾರಣ?
ಎ) ಕಣ್ಣಿನ ಅಕ್ಷಿಪಟಲವು (ರೆಟಿನಾ) ಮುಂದಕ್ಕೆ ಚಾಚಿಕೊಳ್ಳುವುದು.
ಬಿ) ಕಣ್ಣಿನ ಅಕ್ಷಿಪಟಲವು (ರೆಟಿನಾ) ಹಿಂದಕ್ಕೆ ಚಾಚಿಕೊಳ್ಳುವುದು.
ಸಿ) ಕಣ್ಣಿನ ಪಾಪೆಯು (ಪುಪಿಲ್) ಸಂಕುಚಿತಗೊಳ್ಳುವುದು.
ಡಿ) ಕಣ್ಣಿನ ಪಾಪೆಯು (ಪುಪಿಲ್) ಹಿಗ್ಗುವುದು.

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಮಹಾಯಾನದ ಉಪಪಂಥವಾಗಿದೆ.
2. ಹಿಂದೂ ಧರ್ಮದ ಪ್ರಭಾವವನ್ನು ಕಾಣಬಹುದು.
3. ತಂತ್ರ, ಮಂತ್ರ ಹಾಗೂ ಯಂತ್ರಗಳಲ್ಲಿ ನಂಬಿಕೆಯುಳ್ಳವರು.
4. ಇವರ ಪ್ರಮುಖ ದೇವತೆ – ತಾರಾ.

ಮೇಲಿನ ಹೇಳಿಕೆಗಳು ಯಾವ ಪಂಥದ ಕುರಿತು ವಿವರಣೆ ನೀಡುತ್ತದೆ.
ಎ) ಥೆರವಾಡ ಬುದ್ಧಿಸಂ
ಬಿ) ಆಜೀವಿಕಾ
ಸಿ) ವಜ್ರಾಯನ ಡಿ) ಸಿದ್ಧ

7) ಅಭೀರರು ಕೆಳಗಿನ ಯಾವ ದೇವರ ಆರಾಧಕರು?
ಎ) ಭೈರವ ಬಿ) ಕಾಳಿ
ಸಿ) ಶಕ್ತಿ ಡಿ) ಕೃಷ್ಣ

8) ಸಂಘಂ ಕಾಲದಲ್ಲಿ ದಕ್ಷಿಣ ಭಾರತಕ್ಕೆ ಭೇಟಿ ನೀಡುತ್ತಿದ್ದ ಗ್ರೀಕೋ–ರೋಮನ್ ವರ್ತಕರನ್ನು ತಮಿಳು ಸಾಹಿತ್ಯದಲ್ಲಿ ಏನೆಂದು ಕರೆಯಲಾಗಿದೆ?
ಎ) ಪಹ್ಲವರು ಬಿ) ಯವನರು
ಸಿ) ಯೌನರು ಡಿ) ಅಯ್ಯನವರು

9) ಚೋಳರ ರಾಜಲಾಂಛನ ಯಾವುದು?
ಎ) ಮೀನು ಬಿ) ಹುಲಿ
ಸಿ) ಸಿಂಹ ಡಿ) ಕುದುರೆ

10) ಲೋಧಿ ಸಂತತಿಯವರು ಕೆಳಗಿನ ಯಾವ ಮೂಲಕ್ಕೆ ಸೇರಿದವರು?
ಎ) ತೈಮೂರಿನ ಟರ್ಕರು
ಬಿ) ಶುದ್ಧ ಟರ್ಕರು
ಸಿ) ಶುದ್ಧ ಅಫ್ಘನ್ನರು ಡಿ) ಯಾರು ಅಲ್ಲ

11) ಸುಲ್ತಾನರ ಕಾಲದಲ್ಲಿ "ಅರಘಟ್ಟ" ಎಂದರೇನು?
ಎ) ಜೀವರಕ್ಷಣೆಗೆ ಅಗತ್ಯವಾದ ನೀರಿನ ಸಂಗ್ರಹಣಾ ಕೇಂದ್ರ
ಬಿ) ನೀರಾವರಿ ಕಾಲುವೆ
ಸಿ) ಕೋಟೆಗಳನ್ನು ಒಡೆಯುವ ಯಂತ್ರ
ಡಿ) ಒಂದು ವಿಧದ ವಸ್ತ್ರ

12) ಕೆಳಗಿನ ಯಾವ ಮಸೂದೆಗಳನ್ನು ರಾಷ್ಟ್ರಪತಿಗಳ ಒಪ್ಪಿಗೆಯ ನಂತರವೇ ಸಂಸತ್ತಿನಲ್ಲಿ ಮಂಡಿಸಬಹುದು?
1. ಸಂವಿಧಾನ ತಿದ್ದುಪಡಿ ಮಸೂದೆ
2. ಹೊಸ ಅಖಿಲ ಭಾರತ ಸೇವೆಯ ರಚನೆಗೆ ಅವಕಾಶ ಒದಗಿಸುವ ಮಸೂದೆ
3. ಹೊಸ ರಾಜ್ಯಗಳ ರಚನೆಗೆ ಸಂಬಂಧಿಸಿದ ಮಸೂದೆ
4. ಹಣಕಾಸು ಮಸೂದೆ

ಆಯ್ಕೆಗಳು:
ಎ) 1 & 4 ಬಿ) 2 & 4
ಸಿ) 1, 2, 3 & 4 ಡಿ) 3 & 4

13) ಭಾರತದಲ್ಲಿ ಒಂಬುಡ್ಸ್‌ಮನ್ ಸ್ಥಾಪಿಸುವ ಕಲ್ಪನೆಯನ್ನು ನೀಡಿದವರಾರು?
ಎ) ಎಂ.ಸಿ. ಸೆಟಲ್ವಾಡ್
ಬಿ) ಎಲ್. ನಾಗೇಶ್ವರ ರಾವ್
ಸಿ) ನ್ಯಾ. ಜಿ.ಎಸ್. ನರಸಿಂಹನ್
ಡಿ) ಜಿತೇಂದ್ರಕುಮಾರ ಮಹೇಶ್ವರಿ

14) ಭಾರತೀಯ ಸಂವಿಧಾನದ ಯಾವ ಭಾಗವು ಕೇಂದ್ರ–ರಾಜ್ಯ ಹಣಕಾಸು ಸಂಬಂಧಗಳೊಂದಿಗೆ ವ್ಯವಹರಿಸುತ್ತದೆ?
ಎ) XIV ನೇ ಭಾಗ ಬಿ) VII ನೇ ಭಾಗ
ಸಿ) XII ನೇ ಭಾಗ ಡಿ) XVI ನೇ ಭಾಗ



Scanned with CamScanner

www.shikarat.com



15) ಪರಿಸರಣ ಮಳೆಯು ಯಾವ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ?
ಎ) ಸಮಭಾಜಕ ವೃತ್ತ ಪ್ರದೇಶ
ಬಿ) ಸಮಶೀತೋಷ್ಣ ಪ್ರದೇಶ
ಸಿ) ಟೈಗಾ ಪ್ರದೇಶ
ಡಿ) ಮೆಡಿಟರೇಯಿನ್ ಪ್ರದೇಶ

16) ಭಾರತದಲ್ಲಿ ಸಾಮಾನ್ಯವಾಗಿ 'ಫಿಶಿಂಗ್ ಕ್ಯಾಟ್' ಗಳು ಕಂಡುಬರುವ ಪ್ರದೇಶ?
ಎ) ಪಶ್ಚಿಮ ಘಟ್ಟಗಳು
ಬಿ) ಸುಂದರ್‌ಬನ್ಸ್‌ನ ಮ್ಯಾಂಗ್ರೋವ್ ಅರಣ್ಯಗಳು
ಸಿ) ಹಿಮಾಲಯದ ತುದಿ ಬೆಟ್ಟಗಳು
ಡಿ) ಮೇಲಿನ ಎಲ್ಲವೂ

17) ಕೆಳಕಂಡವುಗಳಲ್ಲಿ ಯಾವುದು ಸಸ್ಯಗಳ ವಯಸ್ಸಿನ ಅಧ್ಯಯನವಾಗಿದೆ?
ಎ) ಡೆಂಡ್ರಾಲಜಿ
ಬಿ) ಡೆಂಡ್ರೋಕ್ರೋನಾಲಜಿ
ಸಿ) ಅಂಡಾಲಜಿ    ಡಿ) ಅನಾಟಮಿ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ ID Square, 1st ಮಹಡಿ ಧಾರವಾಡ-580001 ಮೊ: 7022471511, 7022471511

18) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಖಂಡಾಂತರ ಕವಚವನ್ನು "ಸಿಯಾಲ್" ಎಂದು ಕರೆಯಲಾಗುತ್ತದೆ.
2. ಸಾಗರೀಕ ಕವಚವನ್ನು "ಸೀಮಾ" ಎಂದು ಕರೆಯಲಾಗುತ್ತದೆ.
3. ಖಂಡಾಂತರ ಕವಚವು ಸಾಗರೀಕ ಕವಚಕ್ಕಿಂತ ಹೆಚ್ಚು ದಪ್ಪವಾಗಿರುತ್ತದೆ.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?
ಎ) 1, 2 & 3    ಬಿ) 1 & 3
ಸಿ) 3 ಸರಿಯಾಗಿದ್ದು, 1 & 2 ಅದಲು ಬದಲಾಗಿದೆ.
ಡಿ) ಯಾವುದು ಅಲ್ಲ

19) ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಸಭಾಧ್ಯಕ್ಷನು ಸಂವಿಧಾನದಿಂದ ಅಧಿಕಾರವನ್ನು ಎರವಲು ಪಡೆದಿದ್ದಾನೆ.
2. ಸಂಸತ್ತಿನಲ್ಲಿ ಸಂವಿಧಾನದ ಕೊನೆಯ ವಿಶ್ಲೇಷಕ ರಾಷ್ಟ್ರಪತಿ ಆಗಿರುತ್ತಾರೆ.
3. ಸ್ಪೀಕರ್ ಚುನಾವಣೆ ದಿನಾಂಕವನ್ನು ರಾಷ್ಟ್ರಪತಿಗಳು ನಿರ್ಧರಿಸುತ್ತಾರೆ.

ತಪ್ಪಾದ ಹೇಳಿಕೆಗಳನ್ನು ಗುರ್ತಿಸಿ.
ಎ) 1 & 2    ಬಿ) 2 & 3
ಸಿ) 2 ಮಾತ್ರ    ಡಿ) ಮೇಲಿನ ಎಲ್ಲವೂ

20) ಈ ಕೆಳಗಿನ ಯಾವುದು ಶ್ರೀನಗರವನ್ನು ಲೇಹ್‌ನೊಂದಿಗೆ ಜೋಡಿಸುತ್ತದೆ?
ಎ) ಮನಾ ಪಾಸ್    ಬಿ) ರೋಹ್ತಂಗ್ ಪಾಸ್
ಸಿ) ನಾಥುಲಾ ಪಾಸ್    ಡಿ) ಜೋಜಿಲಾ ಪಾಸ್

21) ಕೆಳಗಿನವುಗಳಲ್ಲಿ ಯಾವುದನ್ನು ತಪ್ಪಾಗಿ ಹೊಂದಿಸಲಾಗಿದೆ?
1. ಟೈಫೂನ್ಸ್ – ಚೀನಾ ಸಮುದ್ರ
2. ಹರಿಕೇನ್ – ಹಿಂದೂ ಮಹಾಸಾಗರ
3. ಸೈಕ್ಲೋನ್ – ವೆಸ್ಟ್ ಇಂಡೀಸ್
4. ಟೋರ್ನ್ಯಾಡೋ – ಆಸ್ಟ್ರೇಲಿಯಾ

ಆಯ್ಕೆಗಳು :
ಎ) 1, 2 & 3    ಬಿ) 2, 3 & 4
ಸಿ) 1, 2 & 4    ಡಿ) 2 & 3

22) ಕೆಳಗಿನವುಗಳಲ್ಲಿ ಯಾವುದು ಭಾರತದ ಅತಿದೊಡ್ಡ ಉಪ್ಪಿನ ಸರೋವರವಾಗಿದೆ?
ಎ) ದಾಲ್ ಸರೋವರ    ಬಿ) ವುಲಾರ್ ಸರೋವರ
ಸಿ) ಚಿಲ್ಕಾ ಸರೋವರ    ಡಿ) ಪುಲಿಕಾಟ್ ಸರೋವರ

23) "ಭರ್ಭುತ್ ನದಿ ಯೋಜನೆ" ಯಾವ ನದಿಗೆ ಸಂಬಂಧಿಸಿದ್ದಾಗಿದೆ?
ಎ) ಬ್ರಹ್ಮಪುತ್ರ    ಬಿ) ನರ್ಮದಾ
ಸಿ) ಚೀನಾಬ್    ಡಿ) ರಾವಿ

24) 'ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ' ಆಚರಿಸಲ್ಪಡುವುದು?
ಎ) ಜನವರಿ 26    ಬಿ) ಸೆಪ್ಟಂಬರ್ 15
ಸಿ) ಆಗಸ್ಟ್ 15    ಡಿ) ನವೆಂಬರ್ 26

25) "ಜೀವಿಸುವ ಗ್ರಹ ಸೂಚ್ಯಂಕ" (Living Planet Index) ನ್ನು ಯಾರು ಬಿಡುಗಡೆ ಮಾಡುತ್ತಾರೆ?
ಎ) IUCN    ಬಿ) WWF
ಸಿ) UNO    ಡಿ) UNCTAD

26) ಕೆಳಗಿನವುಗಳಲ್ಲಿ ಯಾವುದು ಸಿಂಹಗಳ ಸಂರಕ್ಷಿತ ತಾಣವಲ್ಲ?
ಎ) ಕುನೋ ವನ್ಯಜೀವಿಧಾಮ
ಬಿ) ಚಂದ್ರಪ್ರಭಾ ವನ್ಯಜೀವಿ ಧಾಮ
ಸಿ) ಕುಂಭಳಗಢ ವನ್ಯಜೀವಿ ಧಾಮ
ಡಿ) ಕೆನ್–ಬೆಟ್ವಾ ಅರಣ್ಯ ಪ್ರದೇಶ

27) ಕೆಳಗಿನ ಯಾವುದು "ಷೇರು ವಿಕ್ರಯ"ದ ಪ್ರಯೋಜನಗಳಾಗಿವೆ?
1. ವಿತ್ತೀಯ ಕೊರತೆ ನಿಯಂತ್ರಣ
2. ಸರ್ಕಾರಿ ಸಾಲ ತಗ್ಗಿಸುವಿಕೆ
3. ಮೂಲಸೌಕರ್ಯ ಅಭಿವೃದ್ಧಿಗೆ ಹಣಕಾಸಿನ ನೆರವು



Scanned with CamScanner

www.shikarat.com



ಆಯ್ಕೆಗಳು :
ಎ) 1 & 2 ಬಿ) 2 & 3
ಸಿ) 1 & 3 ಡಿ) 1, 2 & 3

28) "ದಟ್ಟಿ" ಕುಣಿತವು ಯಾವ ಜಿಲ್ಲೆಯಲ್ಲಿ ಕಂಡುಬರುವ ಕಲಾ ಪ್ರದರ್ಶನವಾಗಿದೆ?
ಎ) ಬೆಳಗಾವಿ ಬಿ) ಉತ್ತರ ಕನ್ನಡ
ಸಿ) ಕೊಡಗು ಡಿ) ಮಂಗಳೂರು

29) ನಮ್ಮ ರಾಜ್ಯದ ಮೊದಲ ರಾಷ್ಟ್ರೀಯ ಆಯುಷ್ ಕ್ರೀಡಾ ಔಷಧ ಕೇಂದ್ರ (Ayush Sports Medicine Centre) ಎಲ್ಲಿ ಆರಂಭವಾಗಲಿದೆ?
ಎ) ಬೆಂಗಳೂರು ಬಿ) ಮಂಗಳೂರು
ಸಿ) ಮಂಡ್ಯ ಡಿ) ವಿಜಯಪುರ

30) ಸಿಂಧೂ ನಾಗರಿಕತೆಯ ಯಾವ ಸ್ಥಳವನ್ನು "ಸಿಂಧ್‌ನ ಓಯಾಸಿಸ್" ಎನ್ನುವರು?
ಎ) ಹರಪ್ಪಾ ಬಿ) ಮೊಹೆಂಜೋದಾರೋ
ಸಿ) ಚಾನ್ಹುದಾರೋ ಡಿ) ಬಾಣಾವಲಿ

31) ಖಗೋಳ ವಿಜ್ಞಾನ, ಗಣಿತ & ಔಷಧ ಸೇರಿದಂತೆ ವಿವಿಧ ಕಲಿಕೆಯ ಶಾಖೆಗಳನ್ನು ಚೆನ್ನಾಗಿ ತಿಳಿದಿದ್ದ ಮಧ್ಯಕಾಲೀನ ಮುಸ್ಲಿಂ ಆಡಳಿತಗಾರ / ಗಾರ್ತಿ ಯಾರು?
ಎ) ಸಿಕಂದರ್ ಲೋಧಿ ಬಿ) ರಜಿಯಾ ಸುಲ್ತಾನಾ
ಸಿ) ಮಹಮ್ಮದ್ – ಬಿನ್ – ತುಘಲಕ್
ಡಿ) ಅಲ್ಲಾವುದ್ದೀನ್ ಖಿಲ್ಜಿ

32) ಸಂಸ್ಕೃತದ ಈ ಕೆಳಗಿನ ಕಾವ್ಯಗಳಲ್ಲಿ ಯಾವುದು ನ್ಯಾಯಾಲಯದ ಒಳಸಂಚುಗಳು & ಚಂದ್ರಗುಪ್ತ ಮೌರ್ಯನು ಅಧಿಕಾರ ಹಿಡಿಯುವುದನ್ನು ತಿಳಿಸುತ್ತದೆ?
ಎ) ಋತು ಸಂಹಾರ ಬಿ) ಮೃಚ್ಛಕಟಿಕ
ಸಿ) ಕುಮಾರಸಂಭವ ಡಿ) ಮುದ್ರಾ ರಾಕ್ಷಸ

33) ಭಾರತದಲ್ಲಿ ಯಾವ ಸ್ಥಳಗಳ ನಡುವೆ ಪ್ರಪ್ರಥಮ (1853) ರೇಲ್ವೆ ಸಂಪರ್ಕ ಉಂಟಾಯಿತು?
ಎ) ಮುಂಬೈ–ಕಲ್ಕತ್ತಾ ಬಿ) ಮುಂಬೈ–ಥಾಣೆ
ಸಿ) ಬೆಂಗಳೂರು–ಕೋಲಾರ
ಡಿ) ಯಾವುದು ಅಲ್ಲ

34) ಸಿಪಾಯಿ ದಂಗೆಗೆ ತತ್‌ಕ್ಷಣದ ಕಾರಣವಾದ ಎನ್–ಫೀಲ್ಡ್ ಬಂದೂಕುಗಳನ್ನು ಎಲ್ಲಿಂದ ತರಿಸಲಾಗಿತ್ತು?
ಎ) ಉಕ್ರೇನ್ ಬಿ) ಉಲವಿಚ್
ಸಿ) ಕ್ರೋವೇಷ್ಯಾ ಡಿ) ಜಾವಾ

35) ವೇದ ಕಾಲದಲ್ಲಿ "ಅಮಾಜು" ಎಂದರೆ...............
ಎ) ಹಾಲುಕೊಡುವ ಹಸು
ಬಿ) ವೇದಗಳ ಚರ್ಚೆಯಲ್ಲಿ ಭಾಗವಹಿಸುವ ಮಹಿಳೆಯರು
ಸಿ) ಜೀವಮಾನವಿಡೀ ವಿವಾಹವಾಗದ ಮಹಿಳೆ
ಡಿ) ವಿಚ್ಛೇದಿತ ಮಹಿಳೆ

36) ಸಂಸತ್ತು ರಾಜ್ಯಪಟ್ಟಿಯಲ್ಲಿನ ವಿಷಯಗಳ ಮೇಲೆ ಕಾನೂನು ಮಾಡಬಹುದು.........
1. ಅಂತರಾಷ್ಟ್ರೀಯ ಒಪ್ಪಂದಗಳ ಅನುಷ್ಠಾನ.
2. 2 ಅಥವಾ ಹೆಚ್ಚು ರಾಜ್ಯಗಳು ನಿರ್ಣಯ ಅಂಗೀಕರಿಸಿ ಸಂಸತ್ತಿಗೆ ಕಾನೂನು/ಶಾಸನ ಮಾಡಲು ವಿನಂತಿಸಿದರೆ
3. ರಾಷ್ಟ್ರಪತಿ ಆಡಳಿತ ಹೇರಿದಾಗ

ಆಯ್ಕೆಗಳು :
ಎ) 1 & 2 ಬಿ) 2 & 3
ಸಿ) 1 & 3 ಡಿ) 1, 2 & 3

37) ಯಾವ ವರ್ಷದಲ್ಲಿ ಹೈ–ಕೋರ್ಟ್‌ನ್ನು ಮೊದಲ ಬಾರಿ ಸ್ಥಾಪಿಸಲಾಯಿತು?
ಎ) 1860 ಬಿ) 1861
ಸಿ) 1972 ಡಿ) 1980

38) ಕೆಳಗಿನ ಯಾವ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದಿಲ್ಲ?
ಎ) ಕಾನೂನಿನ ಗಣನೀಯ ಅಂಶಗಳನ್ನು ಒಳಗೊಂಡಿರುವ ಸಾಂವಿಧಾನಿಕ ವಿಷಯಗಳು
ಬಿ) ಅಧೀನ ನ್ಯಾಯಾಲಯವು ಕ್ರಿಮಿನಲ್ ಪ್ರಕರಣಕ್ಕೆ ನೀಡಿದ ಶಿಕ್ಷೆಯನ್ನು ಉಚ್ಚ ನ್ಯಾಯಾಲಯದಿಂದ ದೃಢೀಕರಿಸಲ್ಪಟ್ಟಿದ್ದರೆ
ಸಿ) ಅಧೀನ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪರಾಧದಲ್ಲಿ ನಿರಪರಾಧಿಯೆನಿಸಿಕೊಂಡ ವ್ಯಕ್ತಿಗೆ ಉಚ್ಚ ನ್ಯಾಯಾಲಯ ಮರಣ ದಂಡನೆ ವಿಧಿಸಿದರೆ
ಡಿ) ಕ್ರಿಮಿನಲ್ ಪ್ರಕರಣದಲ್ಲಿ ಅಧೀನ ನ್ಯಾಯಾಲಯವು ಗಲ್ಲು ಶಿಕ್ಷೆಯಿಂದ ಹಿಂದೆ ಸರಿದಿದ್ದು ಉಚ್ಚ ನ್ಯಾಯಾಲಯ ಮರಣ ದಂಡನೆ ನೀಡಿದಾಗ

39) ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಗುರ್ತಿಸಿ.
1. ಸುಪ್ರೀಂ ಕೋರ್ಟ್‌ನ ರಿಟ್ ವ್ಯಾಪ್ತಿ ಹೈ–ಕೋರ್ಟ್‌ಗಿಂತ ವಿಶಾಲ ವ್ಯಾಪ್ತಿಯನ್ನೊಳಗೊಂಡಿದೆ.
2. ವ್ಯಕ್ತಿಂಯೋರ್ವನ ಮೂಲಭೂತ ಹಕ್ಕಿಗೆ ತೊಂದರೆಯುಂಟಾದಾಗ ಮೊದಲು ಹೈ–ಕೋರ್ಟ್‌ಗೆ ಹೋಗಿ ನಂತರ ಸುಪ್ರೀಂ ಕೋರ್ಟ್‌ಗೆ ಬರಬೇಕು.
3. ಸುಪ್ರೀಂ ಕೋರ್ಟ್‌ನ ತೀರ್ಮಗಳು ಇತರೆಲ್ಲ ಹೈ–ಕೋರ್ಟ್‌ಗಳ ಮೇಲೆ ನಿರ್ಬಂಧಿತ ವಾಗಿವೆ.

ಆಯ್ಕೆಗಳು:
ಎ) 1 & 2 ಬಿ) 1 ಮಾತ್ರ
ಸಿ) 3 ಮಾತ್ರ ಡಿ) 1, 2 & 3

40) ಮಿಕ್ಸರ್ ಗ್ರೈಂಡರ್‌ಲ್ಲಿ ಬಳಸಲ್ಪಡುವ ಬಲ ಯಾವುದು?
ಎ) ಗುರುತ್ವಾಕರ್ಷಣ ಬಲ
ಬಿ) ಕೇಂದ್ರಾಭಿಮುಖ ಬಲ
ಸಿ) ಕೇಂದ್ರ ತ್ಯಾಗಿ ಬಲ
ಡಿ) ಯಾವುದು ಅಲ್ಲ



Scanned with CamScanner

www.shikarat.com



41) ಯಾವುದೇ ಕಾರ್ಯದಲ್ಲಿ ವಸ್ತುವಿನ ಅಣುಗಳ ಮೂಲಕ ನಡೆಯುವ ಉಷ್ಣದ ವರ್ಗಾವಣೆಯು..............?

ಎ) ಸಂವಹನ ಬಿ) ವಹನ

ಸಿ) ವಿಕಿರಣ ಡಿ) ಹೀರುವಿಕೆ

42) ಗಣಕಯಂತ್ರದಲ್ಲಿ ವಿವಿಧ ಸಾಂದ್ರತೆಯಲ್ಲಿ ದತ್ತಾಂಶ ಶೇಖರಿಸಿಡುವ ಮೆಮೊರಿ ಯಾವುದು?

ಎ) RAM ಬಿ) PROM

ಸಿ) ROM ಡಿ) EPROM

43) ಹೊಂದಿಸಿ ಬರೆಯಿರಿ.

| ವಿಕಿರಣಗಳು | ಅನ್ವಯಗಳು |
|---|---|
| P. ನೇರಳಾತೀತ | 1. ಬೆಸುಗೆಗಳಲ್ಲಿನ ಬಿರುಕುಗಳ ಪತ್ತೆ |
| Q. ಕ್ಷ-ಕಿರಣಗಳು | 2. ಪುರಾತನ ವರ್ಣಚಿತ್ರಗಳ ಅಸಲಿಯತ್ತ ಪತ್ತೆ |
| R. ಗಾಮಾ ವಿಕಿರಣಗಳು | 3. ದ್ಯುತಿ ವಿದ್ಯುತ್ ಎಚ್ಚರಿಕೆ ಘಂಟೆಗಳಲ್ಲಿ |
| S. ಅವಗೆಂಪು ವಿಕಿರಣಗಳು | 4. ದ್ಯುತಿ ವಿದ್ಯುತ್ ಪರಿಣಾಮ ಉಂಟುಮಾಡಲು |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 3 | 4 | 2 | 1 |
| ಬಿ) | 3 | 1 | 4 | 2 |
| ಸಿ) | 4 | 1 | 3 | 2 |
| ಡಿ) | 2 | 1 | 4 | 3 |

44) ವಿದ್ಯುತ್ ಶಕ್ತಿಯ ಆಯಸ್ಕಾಂತೀಯ ಪರಿಣಾಮವನ್ನು ಕಂಡುಹಿಡಿದವರು?

ಎ) ಮ್ಯಾಕ್ಸ್‌ವೆಲ್ ಬಿ) ಫ್ಯಾರಡೇ

ಸಿ) ಎಂಪೀಯರ್ ಡಿ) ಓರ್ಸ್ಟೆಡ್

45) ಅಂತರಾಷ್ಟ್ರೀಯ ದಿನಾಂಕ ರೇಖೆ ಕೆಳಗಿನ ಯಾವ ಜಲಸಂಧಿ ಮೂಲಕ ಹಾದು ಹೋಗಿದೆ?

ಎ) ಡೋವರ್ ಜಲಸಂಧಿ

ಬಿ) ಬೇರಿಂಗ್ ಜಲಸಂಧಿ

ಸಿ) ಜಿಬ್ರಾಲ್ಟರ್ ಜಲಸಂಧಿ

ಡಿ) ಫ್ಲೋರಿಡಾ ಜಲಸಂಧಿ

46) ಪೂಜಾಳು ಲಾವೋಸ್‌ನಿಂದ ಅಂತರಾಷ್ಟ್ರೀಯ ದಿನ ರೇಖೆ ಹಾದು ಅಮೆರಿಕಾಕ್ಕೆ ಹೋದರೆ ಅವಳು..............?

ಎ) ಒಂದು ದಿನ ಕಳೆದುಕೊಳ್ಳುತ್ತಾಳೆ

ಬಿ) ಯಾವುದೇ ಬದಲಾವಣೆ ಇಲ್ಲ

ಸಿ) ಒಂದು ದಿನ ಪಡೆದುಕೊಳ್ಳುತ್ತಾಳೆ

ಡಿ) ಎರಡು ದಿನ ಕಳೆದುಕೊಳ್ಳುತ್ತಾಳೆ

47) ಸಂವಿಧಾನದಲ್ಲಿ ಯಾವುದನ್ನು "ಸಂವಿಧಾನದ ಆತ್ಮ" ಎಂದು ಪರಿಗಣಿಸಲಾಗಿದೆ?

ಎ) ಪ್ರಸ್ತಾವನೆ

ಬಿ) ರಾಜ್ಯನೀತಿ ನಿರ್ದೇಶಕ ತತ್ವಗಳು

ಸಿ) ಸಂವಿಧಾನಾತ್ಮಕ ಪರಿಹಾರದ ಹಕ್ಕು

ಡಿ) ಯಾವುದು ಅಲ್ಲ

48) ಕರ್ನಾಟಕದ ಏಕೀಕರಣದ ಪ್ರಥಮ ಸಮ್ಮೇಳನ ನಡೆದ ಸ್ಥಳ ಯಾವುದು?

ಎ) ಧಾರವಾಡ ಬಿ) ಮೈಸೂರು

ಸಿ) ಬೆಂಗಳೂರು ಡಿ) ಬೆಳಗಾವಿ

49) ರಾಷ್ಟ್ರಪತಿಗಳ ಮಹಾಭಿಯೋಗದ ಕಾರ್ಯವಿಧಾನ?

ಎ) ನ್ಯಾಯಾಂಗ ಕಾರ್ಯವಿಧಾನ

ಬಿ) ಅರೆ-ನ್ಯಾಯಾಂಗ ಪ್ರಕ್ರಿಯೆ

ಸಿ) ಶಾಸಕಾಂಗ ಕಾರ್ಯವಿಧಾನ

ಡಿ) ಕಾರ್ಯಾಂಗೀಯ ಪ್ರಕ್ರಿಯೆ

50) ಕೆಳಗಿನ ಯಾವ ಸಂವಿಧಾನಿಕ ತಿದ್ದುಪಡಿ ಕಾಯ್ದೆಯು ಮತದಾನದ ವಯಸ್ಸನ್ನು 21 ರಿಂದ 18 ವರ್ಷಕ್ಕೆ ಇಳಿಸಿತು?

ಎ) 61ನೇ ತಿದ್ದುಪಡಿ ಬಿ) 42ನೇ ತಿದ್ದುಪಡಿ

ಸಿ) 84ನೇ ತಿದ್ದುಪಡಿ ಡಿ) 44ನೇ ತಿದ್ದುಪಡಿ

51) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಸೌರಕಲೆಗಳಲ್ಲಿ ಆಯಸ್ಕಾಂತೀಯ ಕ್ಷೇತ್ರ ಹೆಚ್ಚಾಗಿರುತ್ತದೆ
2. ಸೌರ ಕಲೆಗಳು ಸುತ್ತಲಿನ ಪ್ರದೇಶಕ್ಕಿಂತ ಕಪ್ಪಾಗಿ ಕಾಣಲು ಅವು ಸಾವಿರಾರು ಡಿಗ್ರಿ ತಾಪವನ್ನು ಕಡಿಮೆ ಹೊಂದಿರುವುದೇ ಕಾರಣವಾಗಿದೆ.

ಮೇಲಿನವುಗಳಲ್ಲಿ ಸರಿಯಾಗಿರದ ಹೇಳಿಕೆಗಳು ಯಾವುವು?

ಎ) 1 ಮಾತ್ರ ಬಿ) 2 ಮಾತ್ರ

ಸಿ) 1 & 2 ಡಿ) ಯಾವುದು ಅಲ್ಲ

52) ಕೆಳಗಿನ ಯಾವ ಸಿದ್ಧಾಂತದ ಪ್ರಕಾರ ದಕ್ಷಿಣ ಅಮೆರಿಕಾ & ಆಫ್ರಿಕಾ ಖಂಡಗಳು ಒಂದಾನೊಂದು ಕಾಲದಲ್ಲಿ ಕೂಡಿಕೊಂಡಿದ್ದವು?

ಎ) ರಿಟ್ಟರ್ ಸಿದ್ಧಾಂತ ಬಿ) ಕ್ಯಾಂಟ್ ಸಿದ್ಧಾಂತ

ಸಿ) ಖಂಡಾಂತರ ಚಲನಾ ಸಿದ್ಧಾಂತ

ಡಿ) ಸಾಗರ ತಳ ವಿಸ್ತರಣಾ ಸಿದ್ಧಾಂತ

53) ಕೆಳಗಿನ ಯಾರು ರಾಜ್ಯಸಭೆಯ ಸದಸ್ಯರಾದರೂ, ಎರಡೂ ಸದನಗಳಲ್ಲಿ ಮಾತನಾಡಬಹುದು?

ಎ) ರಾಜ್ಯಸಭೆಯ ಉಪಾಧ್ಯಕ್ಷರು

ಬಿ) ರಾಜ್ಯಸಭೇಯ ಸಭಾನಾಯಕ

ಸಿ) ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯರು

ಡಿ) ರಾಜ್ಯಸಭೆಯ ಸದಸ್ಯರಾಗಿರುವ ಸಚಿವರು

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಟಂಡಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ಮೊ: 7022471511, 7022473611



Scanned with CamScanner

www.shikarat.com

SHIKARAT.COM
Online Education

## For more contact us

**Instagram**
https://www.instagram.com/shikarat_com/

**Telegram**
https://telegram.me/shikarat

**Facebook**
https://www.facebook.com/shikarat/

**Twitter**
https://twitter.com/Shikarat_com

**Pinterest**
https://in.pinterest.com/shikarat_com/

**Website**
www.shikarat.com

**Email**
Admin@shikarat.com

SHIKARAT.COM
Online Education

**Sharing is Caring**

**If it is helpful Please Share with your friends**

9742928829

www.shikarat.com



54) ಪಾಶುಪತರು, ಕಾಪಾಲಿಕರು, ಕಾಳಮುಖರು ಯಾವ ಪಂಥದಲ್ಲಿ ಕಂಡುಬರುತ್ತಾರೆ?
ಎ) ವೈಷ್ಣವ ಮತ   ಬಿ) ಶೈವಮತ
ಸಿ) ಭಾಗವತ   ಡಿ) ಜೈನಧರ್ಮ

55) ಆರ್‌ಬಿಐ ವಸತಿ ಹಣಕಾಸು ಸಂಸ್ಥೆಗಳಿಗೆ ವಿಸ್ತರಿಸಿದ ವ್ಯವಸ್ಥೆಯಾದ ಆರ್‌ಬಿಐಎ ನ ವಿಸ್ತೃತ ರೂಪ?
ಎ) Risk Based Internal Audit
ಬಿ) Reserve Bank Internal Assessment
ಸಿ) Reserve Bank of India Audit
ಡಿ) ಯಾವುದು ಅಲ್ಲ

56) ಭಾರತೀಯ ರೇಡಿಯೋ ಖಗೋಳ ವಿಜ್ಞಾನದ ಪಿತಾಮಹ ಯಾರು?
ಎ) ನಂದನ ಕೇಳ್ಕರ   ಬಿ) ಶಿವಪ್ರಸಾದ್ ಮುಖರ್ಜಿ
ಸಿ) ಗೋವಿಂದ ಸ್ವರೂಪ್
ಡಿ) ರಾಜೇಂದ್ರ ಕುಮಾರ್

57) ಭಾರತದಲ್ಲಿ 2001 ರಿಂದ 2011ರ ಜನಗಣತಿ ನಡುವೆ ಸಾಕ್ಷರತೆಯ ಪ್ರಮಾಣ ಎಷ್ಟರಷ್ಟು ಹೆಚ್ಚಾಗಿದೆ?
ಎ) 9.2 %   ಬಿ) 10.6 %
ಸಿ) 5.5 %   ಡಿ) 7.8 %

58) ಭಾರತದಲ್ಲಿ 2011ರ ಜನಗಣತಿ ಪ್ರಕಾರ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಜಿಲ್ಲೆ ಯಾವುದು?
ಎ) ಥಾಣೆ, ಮಹಾರಾಷ್ಟ್ರ
ಬಿ) ಓಣಂ, ಕೇರಳ
ಸಿ) ಮೇದಿನಿಪುರ, ಪ. ಬಂಗಾಳ
ಡಿ) ಕಚ್ಛ್, ಗುಜರಾತ್

59) 2011 ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಜಾತಿಯಾಧಾರಿತ ಜನಗಣತಿಯನ್ನು ಯಾವ ರಾಜ್ಯದಿಂದ ಆರಂಭಿಸಲಾಗಿದೆ?
ಎ) ಕೇರಳ   ಬಿ) ಪಂಜಾಬ್
ಸಿ) ತ್ರಿಪುರಾ   ಡಿ) ರಾಜಸ್ಥಾನ

60) ಗಜಾಷ್ಟಕ ಕೃತಿಯನ್ನು ರಚಿಸಿದ ದೊರೆ ಯಾರು?
ಎ) ದುರ್ವಿನೀತ   ಬಿ) ಅವನೀತ
ಸಿ) ಎರಡನೇ ಶಿವಮಾರ
ಡಿ) ಶ್ರೀ ಪುರುಷ

61) ಕದಂಬ ಮನೆತನವನ್ನು ಮಯೂರ ವರ್ಮ ಯಾವ ನದಿ ದಂಡೆ ಮೇಲೆ ಸ್ಥಾಪಿಸಿದನು?
ಎ) ಕಾಳಿ   ಬಿ) ತುಂಗಾ
ಸಿ) ಭದ್ರಾ   ಡಿ) ವರದಾ

62) ಸಮಭಾಜಕ ವೃತ್ತದಿಂದ ದಕ್ಷಿಣ ಧ್ರುವದ ಕಡೆಗೆ ಹೋದಂತೆ ಎರಡೂ ರೇಖಾಂಶಗಳ ನಡುವಣ ಅಂತರವು ......... ಹೋಗುತ್ತದೆ.
ಎ) ಹೆಚ್ಚಾಗುತ್ತಾ   ಬಿ) ಕಡಿಮೆಯಾಗುತ್ತಾ
ಸಿ) ಸ್ಥಿರವಾಗಿರುತ್ತದೆ
ಡಿ) ಅವುಗಳ ಎತ್ತರದ ಮೇಲೆ ಅವಲಂಬಿತವಾಗಿರುತ್ತದೆ

63) ರಾಜ್‌ಮಹಲ್ ಬೆಟ್ಟಗಳು ಕೆಳಗಿನ ಯಾವ ರಾಜ್ಯದಲ್ಲಿ ಕಂಡುಬರುತ್ತವೆ?
ಎ) ಪಶ್ಚಿಮ ಬಂಗಾಳ   ಬಿ) ರಾಜಸ್ಥಾನ
ಸಿ) ಮಹಾರಾಷ್ಟ್ರ   ಡಿ) ಜಾರ್ಖಂಡ್

64) ಕುಮಸಿ (Kumsi) ಎಂಬ ಪ್ರದೇಶವು ಕಬ್ಬಿಣದ ಅದಿರಿಗೆ ಪ್ರಸಿದ್ಧಿಯಾಗಿದ್ದು, ಕೆಳಗಿನ ಯಾವ ಜಿಲ್ಲೆಯಲ್ಲಿದೆ?
ಎ) ಉಡುಪಿ   ಬಿ) ಹಾವೇರಿ
ಸಿ) ಚಿತ್ರದುರ್ಗ   ಡಿ) ಶಿವಮೊಗ್ಗ

65) "ನೂತನ ಉದಾರೀಕೃತ ಕೈಗಾರಿಕಾ ನೀತಿ"ಯನ್ನು ಭಾರತದಲ್ಲಿ ಯಾವ ಪಂಚವಾರ್ಷಿಕ ಯೋಜನೆಯಲ್ಲಿ ಘೋಷಿಸಲಾಯಿತು?
ಎ) 4ನೇ ಪಂಚವಾರ್ಷಿಕ ಯೋಜನೆ
ಬಿ) 5ನೇ ಪಂಚವಾರ್ಷಿಕ ಯೋಜನೆ
ಸಿ) 6ನೇ ಪಂಚವಾರ್ಷಿಕ ಯೋಜನೆ
ಡಿ) 7ನೇ ಪಂಚವಾರ್ಷಿಕ ಯೋಜನೆ

66) ಕೇಂದ್ರ ಸರ್ಕಾರವು ಪಡೆಯುವ ಆದಾಯ ಸ್ವೀಕೃತಿಗಳು, ಸಾಲದಿಂದ ಬಂದ ಹಣ ಮತ್ತು ಸಾಲ ಮರುಪಾವತಿಯಿಂದ ಸಂದಾಯವಾದ ಹಣಗಳು ಯಾವ ನಿಧಿಗೆ ಹೋಗುತ್ತವೆ?
ಎ) ಭಾರತದ ಸಾದಿಲ್ವಾರು ನಿಧಿ
ಬಿ) ಭಾರತದ ಸಂಚಿತ ನಿಧಿ
ಸಿ) ಪ್ರಧಾನಮಂತ್ರಿ ನಿಧಿ
ಡಿ) ಭಾರತೀಯ ಸಾರ್ವಜನಿಕ ಖಾತೆ ನಿಧಿ

67) ಕರೆನ್ಸಿಯ ಅಪಮೌಲ್ಯದ ಪ್ರಮುಖ ಉದ್ದೇಶ?
ಎ) ಆಮದು ಉತ್ತೇಜನ ಬಿ) ರಫ್ತು ~~ಉತ್ತೇಜನ~~ ನಿರುತ್ತೇಜನ
ಸಿ) ಆಮದು & ರಫ್ತುಗಳೆರಡರ ಉತ್ತೇಜನ
ಡಿ) ರಫ್ತು ಉತ್ತೇಜನ

68) ಕಂಬಳಿ ಹುಳು ಚಿಟ್ಟೆಯಾಗುವುದನ್ನು ಏನೆಂದು ಕರೆಯುತ್ತಾರೆ?
ಎ) ಎಪಿಸ್ಟಾಸಿಸ್
ಬಿ) ಭ್ರೂಣಾವಸ್ಥೆಯ ಪ್ರೇರಣೆ
ಸಿ) ಎಪಿಸ್ಟಾಸಿಸ್   ಡಿ) ರೂಪಾಂತರ

69) ಒಂದು ಲೀಟರ್ ತಂಪುಗಾಳಿಗಿಂತ ಒಂದು ಲೀಟರ್ ಒಣ ಗಾಳಿಯು ಕಡಿಮೆ ತೂಕ ಹೊಂದಿರುತ್ತದೆ. ಏಕೆ?
ಎ) ಕಡಿಮೆ ತಾಪಮಾನದಲ್ಲಿ ಅಣುಗಳ ಸಂಖ್ಯೆ ಕಡಿಮೆ
ಬಿ) ಕಡಿಮೆ ತಾಪಮಾನದಲ್ಲಿ ಅಣುಗಳ ಸಂಖ್ಯೆ ಹೆಚ್ಚು
ಸಿ) ಕಡಿಮೆ ತಾಪಮಾನದಲ್ಲಿ ಅಣುಗಳ ಶಕ್ತಿ ಕಡಿಮೆ
ಡಿ) ಕಡಿಮೆ ತಾಪಮಾನದಲ್ಲಿ ಅಣುಗಳ ಶಕ್ತಿ ಹೆಚ್ಚು

70) ಭೂಮಿಯ ಮೇಲ್ಮೈನಲ್ಲಿ ಶೇಕಡಾ ದ್ರವ್ಯರಾಶಿಯನ್ವಯ ಅತಿ ಹೇರಳವಾಗಿ ಕಂಡುಬರುವ ಧಾತು ಯಾವುದು?
ಎ) ನೈಟ್ರೋಜನ್   ಬಿ) ಆಕ್ಸಿಜನ್
ಸಿ) ಇಂಗಾಲ   ಡಿ) ಸಿಲಿಕಾನ್



Scanned with CamScanner

www.shikarat.com



71) ಒಂದೇ ರೀತಿ ನ್ಯೂಟ್ರಾನ್ ಸಂಖ್ಯೆಗಳನ್ನು ಹೊಂದಿರುವ ಆದರೆ ಬೇರೆ ಬೇರೆ ಪರಮಾಣು ಸಂಖ್ಯೆ ಇರುವ ಪರಮಾಣುಗಳನ್ನು ಹೀಗೆನ್ನುತ್ತಾರೆ?
ಎ) ಐಸೋಟೋಪ್ಸ್ ಬಿ) ಐಸೋಬಾರ್ಸ್
ಸಿ) ಐಸೋಟೋನ್ಸ್ ಡಿ) ಐಸೋಥರ್ಮಲ್

72) ಗಾಜನ್ನು ನಿಧಾನವಾಗಿ ತಂಪುಗೊಳಿಸುವ ಪ್ರಕ್ರಿಯೆ ಯಾವುದು?
ಎ) ಟೆಂಪರಿಂಗ್ ಬಿ) ಅನಿಲನ
ಸಿ) ಸೆಮಿಕ್ವಿಡ್ ಗಾಜು ಡಿ) ಕ್ವೆಂಚಿಂಗ್

73) ಟಾಲ್ಕಮ್ ಪೌಡರಿನ ಮೂಲವಸ್ತು ಯಾವುದು?
ಎ) ಅಮೋನಿಯಂ ನೈಟ್ರೇಟ್
ಬಿ) ನೈಟ್ರೋಗ್ಲಿಸರಿನ್
ಸಿ) ಮೆಗ್ನೀಷಿಯಂ ಸಿಲಿಕೇಟ್
ಡಿ) ಸಿಲ್ವರ್ ಬ್ರೋಮೈಡ್

74) ಈ ಕೆಳಗಿನವರಲ್ಲಿ ಬೈರಾಗಿ ಸಂಪ್ರದಾಯದ ಸ್ಥಾಪಕರು?
ಎ) ಚೈತನ್ಯ ಬಿ) ತುಳಸೀದಾಸ
ಸಿ) ರಮಾನಂದ ಡಿ) ಮೀರಾಬಾಯಿ

75) ಯಾವ ಮೊಘಲ್ ಇತಿಹಾಸಕಾರನು ಬಹದ್ದೂರ್ ಷಾ-1 ರವರಿಗೆ ಆಡಳಿತದ ಬಗೆಗಿನ ನಿರ್ಲಕ್ಷ್ಯ & ತೃಪ್ತಿಯ/ಮನೋರಂಜನಾ ಧೋರಣೆಯಿಂದಾಗಿ "ಷಾ-ಇ-ಬೇಖಾಬರ್" ಎಂದು ಕರೆದನು?
ಎ) ಇನಾಯತ್ ಖಾನ್ ಬಿ) ಸರ್ ಜಾದುನಾಥ ಸರ್ಕಾರ
ಸಿ) ಭೀಮಸೇನ್ ಡಿ) ಖಾಫಿಖಾನ್

76) ಗ್ರೀಕ್ ಭಾಷೆಯಲ್ಲಿ ಮೆಸೊಪೊಟೇಮಿಯಾ ಎಂದರೆ.............?
ಎ) ಎರಡು ನಾಗರಿಕತೆಗಳ ನಡುವಿನ ಅಂತರ
ಬಿ) ಎರಡು ನಾಗರಿಕತೆಗೂ ಇರುವ ವ್ಯಾಪಾರ ಸಂಬಂಧ
ಸಿ) ಎರಡು ನದಿಗಳ ನಡುವಣ ಪ್ರದೇಶ
ಡಿ) ಯಾವುದು ಅಲ್ಲ

77) ಹೊಂದಿಸಿ ಬರೆಯಿರಿ.

| ವಿಧಿ (1) | 2 |
|---|---|
| P. 39 | 1. ನ್ಯಾಯಾಂಗ-ಕಾರ್ಯಾಂಗದಿಂದ ಬೇರ್ಪಡಿಸುವಿಕೆ |
| Q. 44 | 2. ಐತಿಹಾಸಿಕ ಸ್ಮಾರಕಗಳ ರಕ್ಷಣೆ |
| R. 48ಎ | 3. ಏಕರೂಪ ನಾಗರಿಕ ಸಂಹಿತೆ |
| S. 50 | 4. ಸಮಾನ ಕೆಲಸಕ್ಕೆ ಸಮಾನ ವೇತನ |
| T. 49 | 5. ದೇಶದ ಅರಣ್ಯ & ವನ್ಯಮೃಗಗಳ ರಕ್ಷಣೆ |

ಆಯ್ಕೆಗಳು:

| | P | Q | R | S | T |
|---|---|---|---|---|---|
| ಎ) | 1 | 2 | 3 | 4 | 5 |
| ಬಿ) | 4 | 3 | 5 | 1 | 2 |
| ಸಿ) | 4 | 3 | 2 | 1 | 5 |
| ಡಿ) | 3 | 4 | 5 | 1 | 2 |

78) ಭಾರತ ಸಂವಿಧಾನದ ಕೆಳಗಿನ ಯಾವ ತಿದ್ದುಪಡಿಯನ್ವಯ ದೆಹಲಿಗೆ ರಾಷ್ಟ್ರೀಯ ರಾಜಧಾನಿ ಸ್ಥಾನಮಾನವನ್ನು ನೀಡಲಾಯಿತು?
ಎ) 69ನೇ ತಿದ್ದುಪಡಿ ಬಿ) 70ನೇ ತಿದ್ದುಪಡಿ
ಸಿ) 91ನೇ ತಿದ್ದುಪಡಿ ಡಿ) 51ನೇ ತಿದ್ದುಪಡಿ

79) ಶಂಖಲಿಪಿ ಶಾಸನಗಳ ಪ್ರಕಾರ "ಶ್ರೀ ಮಹೇಂದ್ರಾದಿತ್ಯ" ಎಂಬ ಬಿರುದು ಹೊಂದಿದ್ದ ಅರಸ ಯಾರು?
ಎ) ರಾಜೇಂದ್ರ ಚೋಳ ಬಿ) ಮಹೇಂದ್ರ ವರ್ಮನ್
ಸಿ) 1ನೇ ಕುಮಾರಗುಪ್ತ ಡಿ) ಇಮ್ಮಡಿ ಪುಲಕೇಶಿ

80) ತಪ್ಪಾದ ಜೋಡಣೆ ಗುರ್ತಿಸಿ.
ಎ) ಮಿಥಿಲಾ ಚಿತ್ರಕಲೆ – ಬಿಹಾರ
ಬಿ) ವರ್ಲಿ ಚಿತ್ರಕಲೆ – ಗುಜರಾತ್
ಸಿ) ಪಟ್ಟಚಿತ್ರ – ಒಡಿಶಾ ಡಿ) ಪೈಟ್ಕರ್ – ತೆಲಂಗಾಣ

81) ಭಾರತದ ಮೊದಲ 'ಬುಡಕಟ್ಟು ಆರೋಗ್ಯ ವೀಕ್ಷಣಾಲಯ (TriHOb)' ಅನ್ನು ಯಾವ ರಾಜ್ಯ / UT ಘೋಷಿಸಿದೆ?
ಎ) ಮಧ್ಯಪ್ರದೇಶ ಬಿ) ಜಾರ್ಖಂಡ್
ಸಿ) ಗುಜರಾತ್ ಡಿ) ಒಡಿಶಾ

82) ಯಾವ ರಾಜ್ಯವು ಇತ್ತೀಚೆಗೆ ತನ್ನ ಕ್ರೀಡಾ ಪತ್ರಿಕೋದ್ಯಮದ 100ನೇ ವರ್ಷವನ್ನು ಸ್ಮರಿಸಿಕೊಂಡಿದೆ?
ಎ) ಅಸ್ಸಾಂ ಬಿ) ಪಶ್ಚಿಮ ಬಂಗಾಳ
ಸಿ) ಕೇರಳ ಡಿ) ತ್ರಿಪುರ

83) ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಕ್ರೆಡಿಟ್ ಕಾರ್ಡ್‌ಗಳನ್ನು ನೀಡಲು ಅಗತ್ಯವಿರುವ ಕನಿಷ್ಠ ನಿವ್ವಳ ಮೌಲ್ಯ ಎಷ್ಟು?
ಎ) ರೂ. 10 ಕೋಟಿಗಳು
ಬಿ) ರೂ. 50 ಕೋಟಿಗಳು
ಸಿ) ರೂ. 100 ಕೋಟಿಗಳು
ಡಿ) ರೂ. 500 ಕೋಟಿಗಳು

84) SARS-CoV-2 ಚಿಕಿತ್ಸೆಯಲ್ಲಿ ಇತ್ತೀಚೆಗೆ ಪರಿಣಾಮಕಾರಿಯಾದ 'ಮಾಂಟಲುಕಾಸ್ಟ್' ಅನ್ನು ಯಾವ ಕಾಯಿಲೆಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ?
ಎ) ನ್ಯೂಮೋನಿಯಾ ಬಿ) ಅಸ್ತಮಾ
ಸಿ) ದೀರ್ಘಕಾಲದ ಪ್ರತಿರೋಧಕ ಶ್ವಾಸಕೋಶದ ಕಾಯಿಲೆ
ಡಿ) ಕ್ಷಯ

85) ಕ್ರಿಮಿನಲ್ ಪ್ರೊಸೀಜರ್ ಕೋಡ್ (CrPC), 1973 ರ ಸೆಕ್ಷನ್ 144 ರ ಅಡಿಯಲ್ಲಿ, ಅಪಾಯ ಅಥವಾ ಉಪದ್ರವವನ್ನು ತಡೆಗಟ್ಟಲು ಆದೇಶಗಳನ್ನು ನೀಡಲು ಯಾರಿಗೆ ಅಧಿಕಾರವಿದೆ?
ಎ) ಸುಪ್ರೀಂಕೋರ್ಟ್ ಬಿ) ಹೈಕೋರ್ಟ್
ಸಿ) ಜಿಲ್ಲಾ ಮ್ಯಾಜಿಸ್ಟ್ರೇಟ್ ಡಿ) ಗೃಹ ವ್ಯವಹಾರಗಳ ಸಚಿವಾಲಯ

ಫೋ. 7022471511, 7022473611



Scanned with CamScanner

www.shikarat.com



86) ನೀತಿ ಆಯೋಗ್‌ನ ರಾಜ್ಯ ಶಕ್ತಿ ಮತ್ತು ಹವಾಮಾನ ಸೂಚ್ಯಂಕ – (SECI) ರೌಂಡ್ 1 ರಲ್ಲಿ ಯಾವ ರಾಜ್ಯವು ಅಗ್ರಸ್ಥಾನದಲ್ಲಿದೆ?
ಎ) ಕೇರಳ
ಬಿ) ಪಂಜಾಬ್
ಸಿ) ಗುಜರಾತ್
ಡಿ) ಒಡಿಶಾ

87) ಆಕ್ಸ್‌ಫರ್ಡ್ ಯ್ಯೂನಿವರ್ಸಿಟಿ ಪ್ರೆಸ್‌ನ ಇತ್ತೀಚಿನ ಸಂಶೋಧನೆಯ ಪ್ರಕಾರ, 2021ರ ವರ್ಷದ ಮಕ್ಕಳ ಪದವಾಗಿ ಆಯ್ಕೆ ಮಾಡಲಾಗಿದೆ?
ಎ) ಖಿನ್ನತೆ (Depression)
ಬಿ) ವೈರಸ್
ಸಿ) ಆತಂಕ (Anxiety)
ಡಿ) ಶಾಲೆ (School)

88) ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬರುವ ಟೆಲೋಮಿಯರ್ –ಟು– ಟೆಲೋಮಿಯರ್ (ಟಿ2ಟಿ) ಕನ್ಸೋರ್ಟಿಯಂ, ಯಾವ ಸಂಶೋಧನೆಗೆ ಸಂಬಂಧಿಸಿದೆ?
ಎ) ಕೋವಿಡ್–19 ಲಸಿಕೆ
ಬಿ) ಹ್ಯೂಮನ್ ಜಿನೋಮ್
ಸಿ) ಹೆಲ್ತ್‌ಕೇರ್ ರೋಬೋಟ್
ಡಿ) ಕ್ಯಾನ್ಸರ್ ಔಷಧಿ

89) ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಯಾವ ಪಾವತಿ ಬ್ಯಾಂಕ್‌ಗೆ ಶೆಡ್ಯೂಲ್ಡ್ ಬ್ಯಾಂಕ್‌ನ ಸ್ಥಾನಮಾನವನ್ನು ನೀಡಿದೆ?
ಎ) ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್
ಬಿ) ಆದಿತ್ಯ ಬಿರ್ಲಾ ಪೇಮೆಂಟ್ಸ್ ಬ್ಯಾಂಕ್
ಸಿ) ಎನ್‌ಎಸ್‌ಡಿಎಲ್ ಪೇಮೆಂಟ್ಸ್ ಬ್ಯಾಂಕ್
ಡಿ) ಜಿಯೋ ಪೇಮೆಂಟ್ಸ್ ಬ್ಯಾಂಕ್

90) ವಿಶ್ವ ವ್ಯಾಪಾರ ಸಂಸ್ಥೆಯ ಮೇಲ್ಮನವಿ ಸಂಸ್ಥೆ (WTOAB) ಎಲ್ಲಿದೆ?
ಎ) ನ್ಯೂಯಾರ್ಕ್
ಬಿ) ಜಿನೀವಾ
ಸಿ) ಪ್ಯಾರೀಸ್
ಡಿ) ನೈರೋಬಿ

91) ಸುದ್ದಿಯಲ್ಲಿ ಕಾಣಿಸಿಕೊಂಡ 'ಟೆಲ್ಲಿಚೆರಿ ತಳಿ' ಯಾವ ರಾಜ್ಯದ ನೋಂದಾಯಿತ ಸ್ಥಳೀಯ ಕೋಳಿ ತಳಿಯಾಗಿದೆ?
ಎ) ಕರ್ನಾಟಕ
ಬಿ) ಕೇರಳ
ಸಿ) ತಮಿಳುನಾಡು
ಡಿ) ಆಂಧ್ರಪ್ರದೇಶ

92) ಒಬ್ಬ ವ್ಯಕ್ತಿಯು ತನ್ನ ಮನೆಯ ಹಿಂಬದಿಗೆ ನೇರವಾಗಿ 25 ಮೀಟರ್ ನಡೆಯುತ್ತಾನೆ. ಮತ್ತೆ ಬಲಕ್ಕೆ ತಿರುಗುತ್ತಾನೆ ಮತ್ತು 50 ಮೀಟರ್ ನಡೆಯುತ್ತಾನೆ. ಮತ್ತೆ ಎಡಕ್ಕೆ ತಿರುಗುತ್ತಾನೆ ಮತ್ತು 25 ಮೀಟರ್ ನಡೆಯುತ್ತಾನೆ. ಅವನ ಮನೆಯು ಪೂರ್ವ ದಿಕ್ಕಿಗಿದೆ. ಹಾಗಾದರೆ ವ್ಯಕ್ತಿಯು ತನ್ನ ಮನೆಯಿಂದ ಯಾವ ದಿಕ್ಕಿನಲ್ಲಿದ್ದಾನೆ?
ಎ) ಆಗ್ನೇಯ
ಬಿ) ನೈರುತ್ಯ
ಸಿ) ಈಶಾನ್ಯ
ಡಿ) ವಾಯುವ್ಯ

93) ಒಂದು ಪಾತ್ರೆಯಲ್ಲಿ ತುಂಬಿದ ನೀರು 40 ಕೆ.ಜಿ. ತೂಗುತ್ತದೆ. ಆ ಪಾತ್ರೆಯ 1/3 ಭಾಗವು 20 ಕೆ.ಜಿ. ತೂಗುತ್ತದೆ. ಹಾಗಾದರೆ ಪಾತ್ರೆಯ ತೂಕ ಎಷ್ಟು?
ಎ) 10 ಕೆ.ಜಿ.
ಬಿ) 15 ಕೆ.ಜಿ.
ಸಿ) 20 ಕೆ.ಜಿ.
ಡಿ) 25 ಕೆ.ಜಿ.

94) 51x27x35x62x75 ಅನ್ನು 100 ರಿಂದ ಭಾಗಿಸಿದಾಗ ಉಳಿಯುವ ಶೇಷ ಎಷ್ಟು?
ಎ) 50
ಬಿ) 25
ಸಿ) 05
ಡಿ) 01

95) 8 ಮಂದಿ ಪುರುಷರು ಅಥವಾ 12 ಮಂದಿ ಸ್ತ್ರೀಯರು. ಒಂದು ಕೆಲಸವನ್ನು 24 ದಿನಗಳಲ್ಲಿ ಮಾಡಿ ಮುಗಿಸುತ್ತಾರೆ. ಅದೇ ಕೆಲಸವನ್ನು 4 ಮಂದಿ ಪುರುಷರು ಮತ್ತು 2 ಮಂದಿ ಮಹಿಳೆಯರು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತಾರೆ?
ಎ) 30 ದಿನಗಳು
ಬಿ) 32 ದಿನಗಳು
ಸಿ) 36 ದಿನಗಳು
ಡಿ) 48 ದಿನಗಳು

96) 3 ಬೆಲ್‌ಗಳು 9, 12 ಮತ್ತು 15 ನಿಮಿಷದ ಅಂತರದಲ್ಲಿ ಬಾರಿಸುತ್ತವೆ. 3 ಬೆಲ್‌ಗಳು ಬೆಳಿಗ್ಗೆ 7 ಗಂಟೆಯಲ್ಲಿ ಬಾರಿಸಿದರೆ ಮುಂದೆ ಯಾವ ವೇಳೆಯಲ್ಲಿ ಮೂರು ಬೆಲ್‌ಗಳು ಬಾರಿಸುತ್ತವೆ?
ಎ) 8.45 am
ಬಿ) 10.30 am
ಸಿ) 11.00 am
ಡಿ) 10.00 am

97) 1 ರಿಂದ 100 ರವರೆಗೆ ಪೂರ್ಣಾಂಕಗಳಲ್ಲಿ ಎಷ್ಟು ಪೂರ್ಣಾಂಕಗಳು '4' ಅಂಕೆಯನ್ನು ಹೊಂದಿದೆ. ಆದರೆ 4 ರಿಂದ ಭಾಗಿಸಲ್ಪಡುವುದಿಲ್ಲ?
ಎ) 05
ಬಿ) 11
ಸಿ) 12
ಡಿ) 13

98) ಇಂಗ್ಲೀಷ್ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳು ಸಮತಲ ದರ್ಪಣದಲ್ಲೂ ಅದೇ ರೀತಿ ಕಾಣುತ್ತವೆ?
ಎ) 14
ಬಿ) 11
ಸಿ) 09
ಡಿ) 18

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
7022471511, 7022473611

99) ಪ್ರಸ್ತುತವಾಗಿ ಎ & ಬಿ ರವರ ಸರಾಸರಿ ವಯಸ್ಸು 32 ವರ್ಷಗಳು. ಸಿ ಯ ವಯಸ್ಸು ಸೇರಿದಾಗ ಮೂವರ ಸರಾಸರಿ ವಯಸ್ಸು 36 ಆಗುತ್ತದೆ. ಹಾಗಾದರೆ ಸಿ ನ ಪ್ರಸ್ತುತ ವಯಸ್ಸೆಷ್ಟು?
ಎ) 32 ವರ್ಷ
ಬಿ) 38 ವರ್ಷ
ಸಿ) 40 ವರ್ಷ
ಡಿ) 44 ವರ್ಷ

100) 6 ಜನ ಪುರುಷರು ಮತ್ತು 5 ಜನ ಮಹಿಳೆಯರಲ್ಲಿ 3 ಜನ ಪುರುಷರು ಮತ್ತು ಇಬ್ಬರು ಮಹಿಳೆಯರನ್ನು ಒಳಗೊಂಡಂತೆ 5 ಜನರ ತಂಡವನ್ನು ಎಷ್ಟು ವಿಧದಲ್ಲಿ ರಚಿಸಬಹುದು?
ಎ) 180
ಬಿ) 200
ಸಿ) 250
ಡಿ) 300



Scanned with CamScanner